ಮಾಡುವಂಥ ಪ್ರಯತ್ನವನ್ನು ಎಂದೂ ಮಾಡಲಿಲ್ಲ. ಇವತ್ತು ಇವರು ಇಲ್ಲಿ ಇಷ್ಟೆಲ್ಲಾ ಸರ್ಕಾರದ ಕಡೆಯಿಂದ ಬಿಲ್ ಮಂಡನೆ ಮಾಡಿ, ಇದು ನಾಳೆ ಊರ್ಜಿತವಾಗುತ್ತದೆಯೋ, ಇಲ್ಲವೋ ಎಂದು ನಾವು ಇಲ್ಲಿ ಸಂಶಯ ವ್ಯಕ್ತಪಡಿಸುವಂಥ ಸಂದರ್ಭದಲ್ಲಿ, ಕೇರಳದಲ್ಲಿ ಸಹ ಇದೇ ರೀತಿಯಾದ ಕಾನೂನನ್ನು ಪಾಸ್ ಮಾಡಿದ ಸಂದರ್ಭದಲ್ಲಿ ಅಲ್ಲಿಯ ಖಾಸಗಿ ಶಿಕ್ಷಣ ಸಂಸ್ಥೆಯವರು ಸುಪ್ರೀಂ ಕೋರ್ಟ್‌ಗೆ ಅಪೀಲ್ ಹೋಗಿದ್ದರು. ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ನಡೆಯಿತು. ನಡೆದು, ಇವತ್ತು ಒಂದು ದಿನ ಪತ್ರಿಕೆಯಲ್ಲಿ, ಅದರ ತೀರ್ಪು ಬಂದಿದೆ. ಕೇರಳ, ಸಿಇಟಿ ಕಾಯ್ದೆಗೆ ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್ ನಕಾರ. ಏಕೆಂದರೆ, ಇಲ್ಲಿ ನಾವು 75:25 ಎನ್ನುವುದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಕಾನೂನನ್ನು ಮಾಡುತ್ತಿದ್ದೇವೆ. ಕೇರಳದಲ್ಲಿ 50:50 ಎಂದು ಹೇಳಿ, ಹೊಸ ಕಾನೂನು ತಂದಾಗ, ಆ ಕಾನೂನನ್ನು ಛಾಲೆಂಜ್ ಮಾಡಿ, ಖಾಸಗಿ ಶಿಕ್ಷಣ ಸಂಸ್ಥೆಯವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದರು. ಅದರ ತೀರ್ಪು ಬಂದಿದ್ದು, ಅದು ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಸರ್ಕಾರಿ ಅನುದಾನೇತರ ಖಾಸಗಿ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಆಡಳಿತ ಮಂಡಳಿ ಪ್ರವೇಶ ಕೋಟಾವನ್ನು ಶೇ. 50ಕ್ಕೆ ಮಿತಿಗೊಳಿಸುವ ಕೇರಳ ಸರ್ಕಾರದ ವಿವಾದಾಸ್ಪದ ಶಾಸನಕ್ಕೆ ಅಧಿಕೃತ ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಆದರೆ, ಸನ್ಮಾನ್ಯ ಅಧ್ಯಕ್ಷರೇ, ನಾವೇನೋ ಮಹತ್ವದ ವಿಷಯ ಹೇಳುವಾಗ, ಏನು ಎಸ್.ಎಸ್. ಪಾಟೀಲರೆ, ತಾಸುಗಟ್ಟಲೆ ಮಾತನ್ನಾಡುತ್ತೀರಿ. ಒಂದು ಅರ್ಧ ಗಂಟೆ .....

ಅಧ್ಯಕ್ಷರು : ಶೆಟ್ಟರ್‌ರವರೇ, ಚರ್ಚೆಯಾಗಿದೆ.

ಗೊಂದಲ

ಅಧ್ಯಕ್ಷರು : ಆಯಿತು. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಬೇಗ ಮುಗಿಸಿ. ಇದು ಅಲ್ಲಿಗೆ ಹೋಗಬೇಕಲ್ಲವೇ? ಪ್ಲೀಸ್ ಅಂಡರ್‌ಸ್ಟಾಂಡ್.

ಗೊಂದಲ

ಅಧ್ಯಕ್ಷರು : ಆಯಿತು. ಗೊತ್ತಿದೆ. ಕುಳಿತುಕೊಳ್ಳಿ. ದಯವಿಟ್ಟು ಬೇಗ ಮುಗಿಸಿ. ಇಂಪಾರ್ಟೆಂಟ್ ಪಾಯಿಂಟ್ ಅನ್ನು ಪಾಯಿಂಟ್ ಮಾಡಿ. ಬೇಗ ಮುಗಿಸಿ. ಒಂದೈದು ನಿಮಿಷ ಅವರಿಗೆ ಅವಕಾಶ ಕೊಡಿ. ನಿಜ, ಬಿಲ್ ಬೇಗ ಪಾಸ್ ಆಗಬೇಕು. 5 ನಿಮಿಷ ಅವಕಾಶ ಕೊಡಿ.

ಗೊಂದಲ

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಬೋರ್ ಆಗಿದೆ.

ಅಧ್ಯಕ್ಷರು : ಬೋರ್‌ನ ಪ್ರಶ್ನೆಯಲ್ಲ. ಇದು ಆ ಹೌಸ್‌ಗೆ ಹೋಗಬೇಕಲ್ಲವೇ? ಯಡಿಯೂರಪ್ಪನವರೇ, ಈಗ ಸಾಕಷ್ಟು ಚರ್ಚೆಯಾಗಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತ, ಬಹಳ ಹೊತ್ತು ಮಾತನಾಡಬೇಕೆಂದು ಏನೂ ಇಲ್ಲ. ಅನೇಕ ವಿಷಯಗಳು ನಿಮಗೆಲ್ಲಾ ಗೊತ್ತಿರುವಂಥದ್ದೇ. ಮತ್ತೆ ಮತ್ತೆ ತಿಳಿಸುವಂಥ ಪ್ರಯತ್ನ ಮಾಡಿದ್ದಾರೆ. ನಮ್ಮ ಡಿಮ್ಯಾಂಡ್ ಒಂದೇ, ಈ ಮಕ್ಕಳೇನು ಹೋರಾಟ ಮಾಡಿಕೊಂಡು ಫೀ ಸ್ಟ್ರಕ್ಚರ್, ಜಸ್ಟೀಸ್ ಮುರುಗೋಡು ಸಮಿತಿಯವರು ಫಿಕ್ಸ್ ಮಾಡಿದ್ದು, ನಮಗೆ ಅನುಕೂಲವಾಗುವುದಿಲ್ಲ, ಅನ್ಯಾಯವಾಗಿದೆ, ನಾವು ಶಿಕ್ಷಣವನ್ನು ಮುಂದುವರೆಸಲಾಗುವುದಿಲ್ಲ, ಈ ಮಾತೇನು ವಿದ್ಯಾರ್ಥಿಗಳು ಹೇಳಿಕೊಂಡು ಹೋರಾಟ ಮಾಡಿದರು, ಅದರ ಆಧಾರದ ಮೇಲೆ ಈ ಚರ್ಚೆ, ಮ್ಯಾನೇಜ್‌ಮೆಂಟ್ ಜೊತೆ ಚರ್ಚೆ ಎಲ್ಲಾ ಆಯಿತು. ಈಗಾಗಲೇ ಮ್ಯಾನೇಜ್‌ಮೆಂಟ್‌ನವರು

ಮುರುಗೋಡು ಸಮಿತಿಯವರು ಏನು ಫೀ ಸ್ಟ್ರಕ್ಚರ್ ಕೊಟ್ಟಿತ್ತೋ ಅದಕ್ಕಿಂತ ಹೆಚ್ಚು ಹೇರಿ ಅಡ್ಮಿಷನ್‌ನಲ್ಲಿ 50:50 ನಲ್ಲಿ ಮಾಡುತ್ತಿದ್ದಾರೆ. ಹೀಗಾಗಿ ಏನೂ ಉಳಿದಿಲ್ಲ ನಮ್ಮ ಸರ್ಕಾರಕ್ಕೆ ನಮ್ಮ ಒತ್ತಾಯ ಏನು ಈ ಒಂದು ವರ್ಷಕ್ಕೆ ಮುಂದೆ ಏನಾಗೊತ್ತೋ ನೋಡೋಣ, ಆ ಮುರುಗೋಡು ಸಮಿತಿ ಏನು ಫೀ ಸ್ಟ್ರಕ್ಚರ್ ಮಾಡಿದ್ದಾರೆ, ಹಿಂದೆ 2002–2003ನ ವ್ಯತ್ಯಾಸ ಏನು ಇದೆ, ಈ ವ್ಯತ್ಯಾಸವನ್ನು ಇದೊಂದು ಬಾರಿ ತುಂಬಿಕೊಡಿ ಎಂದು ಅವತ್ತಿನಿಂದ ಇವತ್ತಿನವರೆಗೆ ನಾವು ಅಗ್ರಹ ಮಾಡುತ್ತಿದ್ದೇವೆ. ಸರ್ಕಾರ ಒಪ್ಪುತ್ತಿಲ್ಲ ಇದನ್ನು ಪ್ರತಿಭಟನೆ ಮಾಡಿ ಮಕ್ಕಳ ಹಿತದೃಷ್ಟಿಯಿಂದ ಆ ವ್ಯತ್ಯಾಸವನ್ನು ಸರ್ಕಾರ ತುಂಬಿ ಕೊಡಬೇಕೆಂದು ಒತ್ತಾಯ ಮಾಡಿ ನಾವು ಅನಿವಾರ್ಯವಾಗಿ ಧರಣಿ ಮಾಡುತ್ತೇವೆ.

ಗೊಂದಲ

(ಬಿಜೆಪಿಯ ಎಲ್ಲಾ ಸದಸ್ಯರು ಸದನದ ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು)

ಶ್ರೀ ಅರಗ ಜ್ಞಾನೇಂದ್ರ : ಬಡಮಕ್ಕಳ ಭವಿಷ್ಯವನ್ನು ಮೊಟಕು ಮಾಡುವಂಥ ಈ ಕರಾಳ ಶಾಸನವನ್ನು ನಾವು ವಿರೋಧಿಸುತ್ತೇವೆ. ಇದಕ್ಕೆ ನಮ್ಮ ಒಪ್ಪಿಗೆ ಇಲ್ಲ, ಈ ಶಾಸನದಲ್ಲಿ ನಾವು ಪಾರ್ಟಿಯಾಗುವುದಿಲ್ಲ, ಇಂಥ ಬಡಮಕ್ಕಳ ವಿರೋಧಿಯಾಗಿರತಕ್ಕಂಥ, ಖಾಸಗಿ ಸಂಸ್ಥೆಗಳ ಕೈಗೊಂಬೆಯಾಗಿರತಕ್ಕಂಥ ಸರ್ಕಾರ ನೀತಿಯನ್ನು ಪ್ರತಿಭಟಿಸಿ ನಾವು ಧರಣಿ ಮಾಡುತ್ತೇವೆ.

ಗೊಂದಲ

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಇಲ್ಲಿ ಕೇಳಿ ಸರ್ಕಾರ ಈಗ ಒಂದು ಬಿಲ್ ತಂದಿದೆ, ಇದನ್ನು ಒಪ್ಪುವುದು ಬಿಡುವುದು ನಿಮಗೆ ಬಿಟ್ಟ ವಿಚಾರ. ಧರಣಿ ಮಾಡುವುದು ಸಭೆಗೆ ಅಡ್ಡಿಪಡಿಸುವುದು ಎಷ್ಟರಮಟ್ಟಿಗೆ ಸರಿ? ಅದನ್ನು ನೀವು ಯೋಚನೆ ಮಾಡಬೇಕು. ನೀವೂ ಹಲವಾರು ಕಡೆ ಮಾಡಿದ್ದೀರಿ; ದಯಮಾಡಿ ಇಲ್ಲಿ ಎಲ್ಲರೂ ಕೇಳಬೇಕು, ವಿಧಾನಸಭೆಯಲ್ಲಿ ಆಗಲಿ, ಲೋಕ ಸಭೆಯಲ್ಲಾಗಲಿ, ಬಿಲ್ ತಂದಿದ್ದಾರೆ ಅದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ, ಅದರ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ. ಸುಮ್ಮನೆ ಈ ರೀತಿಯಲ್ಲಿ ಧರಣಿ ಮಾಡತಕ್ಕಂಥದ್ದು ಎಷ್ಟರಮಟ್ಟಿಗೆ ಸರಿ? ಅದನ್ನು ನೀವು ಯೋಚಿಸಿ... ಪ್ರಜಾಪ್ರಭುತ್ವದಲ್ಲಿ ನಿಮಗೆ ನಂಬಿಕೆ ಇದ್ದರೆ, ಈ ನಿಯಮಾವಳಿಯಲ್ಲಿ ನಿಮಗೆ ನಂಬಿಕೆ ಇದ್ದರೆ, ನೀವು ಬಹಳ ಆಳವಾಗಿ ಯೋಚಿಸಬೇಕಾದ ವಿಚಾರ ಇದು..

ಗೊಂದಲ

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ದಯಮಾಡಿ ನೀವು ಅವರ ಮಾತು ಕೇಳಿ...

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸರ್ಕಾರ ಉತ್ತರ ಕೊಡುತ್ತದೆ, ದಯಮಾಡಿ ಕೇಳಿ ನಂತರ ಧರಣಿ ಮಾಡಿ ಯಾರು ಬೇಡ ಎನ್ನುತ್ತಾರೆ?.. ಈಗ ಅವರು ಬೇಕಾದಷ್ಟು ವಿಚಾರಗಳನ್ನು ಹೇಳಿದ್ದಾರೆ, ಈ ಸರ್ಕಾರ ಆಡಳಿತ ಮಂಡಳಿಯವರ ಜೊತೆಯಲ್ಲಿ ಶಾಮೀಲಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ವಿದ್ಯಾರ್ಥಿಗಳ ಹಿತವನ್ನು ಕಾಪಾಡುವುದಿಲ್ಲವೆಂದು ಹೇಳಿದ್ದಾರೆ, ಇದು ಎಲ್ಲಾ ಸತ್ಯಕ್ಕೆ ದೂರವಾಗಿರತಕ್ಕಂಥ ವಿಚಾರಗಳು.. (ಗೊಂದಲ).. ಇವರ ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನು ನಾನು ಖಂಡಿಸುತ್ತೇನೆ. ಇವರ ಮಾತುಗಳನ್ನು ನಾವು ಕೇಳಿದ್ದೇವೆ. ನಮ್ಮ ಮಾತುಗಳನ್ನು ಕೇಳಬೇಕು.. ಮಾನ್ಯ ಯಡಿಯೂರಪ್ಪನವರು ನಾಯಕರು ಅನುಭವಸ್ಥರು, ವಿರೋಧಪಕ್ಷದ ಗೌರವಾನ್ವಿತ

ನಾಯಕರು, ನಿಮಗೆ 85 ಜನ ಶಾಸಕರು ಇದ್ದಾರೆ,.. ಈಗ ನಾವು ಉತ್ತರ ಕೊಡಬೇಕಾಗುತ್ತದೆ, ಉತ್ತರವನ್ನು ಕೊಡಲಿಕ್ಕೆ ಇವರು ಅಡ್ಡಿಪಡಿಸುತ್ತಿದ್ದಾರೆ, ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ಸರ್ಕಾರದ ವತಿಯಿಂದ ಮನವಿ ಮಾಡುತ್ತೇನೆ. ದಯಮಾಡಿ ಸರ್ಕಾರದ ಉತ್ತರವನ್ನು ಕೇಳತಕ್ಕಂಥ ಸೌಜನ್ಯವನ್ನು ತಾವು ತೋರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಗೊಂದಲ

(ಧರಣಿ ನಿರತ ಸದಸ್ಯರುಗಳಿಂದ ಸರ್ಕಾರ ವಿರುದ್ಧ ಘೋಷಣೆಗಳು)

ಅಧ್ಯಕ್ಷರು : ದಯಮಾಡಿ ಘೋಷಣೆಗಳನ್ನು ಕೂಗುವುದನ್ನು ನಿಲ್ಲಿಸಿ.. ಮಾನ್ಯ ಸಚಿವರು ದಯಮಾಡಿ ಉತ್ತರ ಕೊಡಿ.. ಅವರೇನು ಉತ್ತರ ಕೊಡುತ್ತಾರೆ ದಯಮಾಡಿ ಕೇಳಿ.

ಗೊಂದಲ

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಬಾವಿಯಲ್ಲಿ ನಿಂತುಕೊಂಡು ಮಾತನಾಡಬಾರದು, ನೀವು ಎಲ್ಲಾ ಹೊಸ ಮೆಂಬರ್ ಇದ್ದೀರಿ, ಬಾವಿಯಲ್ಲಿ ನಿಂತು ಮಾತನಾಡಬಾರದು. ಈಗ ಈ ಮಸೂದೆ ತರಬೇಕಾದರೆ, ಎಲ್ಲಾ ಅಂಶಗಳನ್ನು ಎಕ್ಸ್‌ಪರ್ಟ್ಸ್‌ಗಳನ್ನು ಕನ್‌ಸಲ್ಟ್ ಮಾಡಿ ಸರ್ಕಾರ ಈ ಮಸೂದೆ ತಂದಿದೆ. ಈಗ ಮಾನ್ಯ ಸದಸ್ಯರು ಇದು ನಿಲ್ಲುವುದಿಲ್ಲವೆಂದು ಹೇಳುತ್ತಾರೆ, ಇದಕ್ಕೆ ಬೇಸಿಸ್ ನಾವು ಏನು ಮಾಡಿದ್ದೇವೆ, ಈಗ ಮುರುಗೋಡು ಕಮಿಟಿ ಮತ್ತು ವೆಂಕಟರಾಮನ್ ಕಮಿಟಿ ಸುಪ್ರೀಂ ಕೋರ್ಟಿನ ಗೈಡ್‌ಲೈನ್ಸ್‌ನಲ್ಲಿ ಆದದ್ದು; ಈ ಎರಡು ಕಮಿಟಿಗಳು ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಆದದ್ದು. ಆ ಕಮಿಟಿಗಳ ತೀರ್ಮಾನ ಏನು ಇದೆಯೋ ಆ ಬೇಸಿಸ್ ಮೇಲೆಯೇ ಈ ಬಿಲ್ ತಂದಿರುವುದು. ಈಗ ಸುಪ್ರೀಂ ಕೋರ್ಟು ಕೊಟ್ಟಿರುವುದು ಮಧ್ಯಂತರ ಆದೇಶ. ಅದು ಇನ್ನೂ ಲಾರ್ಜರ್ ಬೆಂಚ್‌ಗೆ ಹೋಗಿದೆ. ಆದ್ದರಿಂದ, ಈ ಬಿಲ್ ನಿಲ್ಲುತ್ತದೆ. ಈ ಲೆಜಿಸ್ಲೇಷನ್ ಖಂಡಿತ ನಿಲ್ಲುತ್ತದೆ, ನನಗೆ ಅನುಮಾನವಿಲ್ಲ. ಆದುದರಿಂದ ಅನೇಕ ಸದಸ್ಯರು ಹೇಳಿದ್ದಾರೆ, ನಮ್ಮ ಮಾನ್ಯ ಯಡಿಯೂರಪ್ಪನವರು ಹಾಗೂ ಮಾನ್ಯ ವಿಶ್ವೇಶ್ವರ ಹೆಗಡೆಯವರು ಸರ್ಕಾರ ಶಾಮೀಲಾಗಿದ್ದಾರೆಂದು ಹೇಳಿದರು. ಇದರಿಂದ ನನ್ನ ಮನಸ್ಸಿಗೆ ಬಹಳ ನೋವಾಯಿತು. ಕಳೆದ ವರ್ಷದಲ್ಲಿ ಇದೇ ಪರಿಸ್ಥಿತಿ ಇತ್ತು. ಇದೇ ಪರಿಸ್ಥಿತಿ ಇದ್ದಾಗ ಸರ್ಕಾರದವರು ಮ್ಯಾನೇಜ್‌ಮೆಂಟ್‌ನವರು ಮಾತನಾಡಿ ಒಂದು ತೀರ್ಮಾನಕ್ಕೆ ಬಂದರು, ಒಂದು ಅಗ್ರಿಮೆಂಟ್‌ಗೆ ಬಂದರು. ಕೋರ್ಟಿನಲ್ಲಿ ಅಫಿಡೆವಿಟ್ ಹಾಕಿದರು. ಆ ರೀತಿಯಲ್ಲಿ ಇವತ್ತಿನ ದಿವಸ ತೀರ್ಮಾನವಾದ ಮೇಲೆ ಆಗ ಸೆಪ್ಟೆಂಬರ್‌ವರೆಗೆ ಲಾಸ್ಟ್‌ಯಿಯರ್ ಅಡ್ಮಿಷನ್ ಮಾಡಿದರು. ಆಗ ಸೆಪ್ಟೆಂಬರ್ ಕೊನೆಯವರೆಗೆ ಮಾಡಿದ್ದಾರೆ. ಅದಕ್ಕಾಗಿಯೇ ಈ ಸಾರಿ 31ನೇ ತಾರೀಖೂ ಇದೆ ಎಂದು ನನಗೆ ಗೊತ್ತಿದೆ. ಆದರೂ ನಾವು, ಇವತ್ತು ಸಹ ಎಂಸಿಐಗೆ ನಾವು ಅರ್ಜಿ ಕೊಟ್ಟಿದ್ದೇವೆ. ಅದರ ಜೊತೆಗೆ ಏನಾಗಿದೆ, ಸುಪ್ರೀಂ ಕೋರ್ಟಿನ ಡಿಷಿಷನ್ ಬರುವುದಕ್ಕಿಂತ ಮುಂಚೆನೇ ಕೌನ್ಸಲಿಂಗ್ ಆಯಿತು. ಆಲ್‌ಮೋಸ್ಟ್ ನಮ್ಮ ಅಡ್ಮಿಷನ್ ಮುಗಿದಿದೆ. ಫೀ ಕಟ್ಟಿದ್ದಾರೆ. They are deemed to have been admitted. ಆದುದರಿಂದ ಇದು ಏನೂ ತೊಂದರೆಯಾಗುವುದಿಲ್ಲ. ಅದರ ಜೊತೆಗೆ ನನ್ನ ಮನಸ್ಸಿಗೆ ನೋವು ಆಗಿದ್ದು ನಾವು ಶಾಮೀಲಾಗಿಲ್ಲ. ಅದು ಸತ್ಯಕ್ಕೆ ದೂರ, ನಾವು ಆಡಳಿತ ಮಂಡಳಿಯ ಜೊತೆಗೆ ಶಾಮೀಲಾಗಿಲ್ಲ, ನಾವು ಮೂರು ಸಲ ಅವರನ್ನು ಕರೆದು ಮಾತನಾಡಿದ್ದರೂ ಸಹ ಅವರು ಒಪ್ಪಲಿಲ್ಲ. ಇಲ್ಲ ನಾವು ಮಾಡುವುದೇ ಸರಿ ಫೀ ಕಡಿಮೆ ಇದೆ ಎಂದು ಹೇಳಿದರು.

ಅದಕ್ಕಾಗಿಯೇ ಇವತ್ತಿನದಿವಸ ನಾವು ಮಕ್ಕಳ ದೃಷ್ಟಿಯಿಂದ, ಪೋಷಕರ ದೃಷ್ಟಿಯಿಂದ, ಜನಗಳ ದೃಷ್ಟಿಯಿಂದ, ಈ ಬಿಲ್ ತಂದಿರುವುದು. ಅದಕ್ಕೆ ನಮ್ಮ ಮುಖ್ಯಮಂತ್ರಿಗಳು ಸಹ ದಿಟ್ಟವಾಗಿ ಹೇಳಿದರು. ಮೊದಲಿನಿಂದಲೂ ಸಹ 75:25 ಎಂದು ನಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದೇವೆ. ಫೀ ಯ ಬಗ್ಗೆ ಕೂಡ ಹೇಳುತ್ತೇನೆ ಕೇಳಿ. ಕೇರಳದಲ್ಲಿ ಥಾಮಸ್ ಎನ್ನುವ ಜಸ್ಟೀಸ್ ಒಬ್ಬರು ಅವರು ಫೀ ಫಿಕ್ಸ್ ಮಾಡಿದರು. ನಾನು ಹೇಳುವುದು ಫೊದಲು ಕೇಳಿ ಸ್ವಾಮಿ. ಅಲ್ಲಿ ಏನಾಯಿತು ಎಂದರೆ, ಸರ್ಕಾರದವರೇ ಆ ಫೀ ಜಾಸ್ತಿ ಇದೆ ಕಡಿಮೆ ಮಾಡಬೇಕು ಎಂಡು ಒಂದು ಲೆಜಿಸ್ಲೇಷನ್ ಮಾಡಿದರು. ಅದು ಸುಪ್ರೀಂ ಕೋರ್ಟಿನಲ್ಲಿ ಚಾಲೆಂಜ್ ಆಗಿದೆ. ಆ ಲೆಜಿಸ್ಲೇಷನ್ ಬಿದ್ದು ಹೋಯಿತು. ಆದುದರಿಂದ, ಈಗ ಏನಾಗಿದೆ, ತಾವು ದಯಮಾಡಿ ಪೋಷಕರ ಹಿತದೃಷ್ಟಿಯಿಂದ ಮಕ್ಕಳ ದೃಷ್ಟಿಯಿಂದ ಜನಗಳ ದೃಷ್ಟಿಯಿಂದ ಇವತ್ತಿನ ದಿವಸ ಈ ಬಿಲ್‌ನ್ನು ತಂದಿದ್ದೇವೆ, ತಾವು ದಯಮಾಡಿ ಇವತ್ತಿನ ದಿವಸ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ....

ಗೊಂದಲ

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಬಿಜೆಪಿ ಸದಸ್ಯರು ಸರ್ಕಾರದ ವಿರುದ್ಧ ಘೊಷಣೆಗಳನ್ನು ಕೂಗುತ್ತಿದ್ದರು)

ಕರ್ನಾಟಕ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ವ್ಯಾಸಂಗ ಕ್ರಮಗಳಿಗೆ (ವಿಶೇಷ ಉಪಬಂಧಗಳು) ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಧೇಯಕ, 2004ರ ಪರ್ಯಾಲೋಚನಾ ಪ್ರಸ್ತಾಪ:

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ವ್ಯಾಸಂಗ ಕ್ರಮಗಳಿಗೆ (ವಿಶೇಷ ಉಪಬಂಧಗಳು) ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2004ರ ಕರ್ನಾಟಕ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ವ್ಯಾಸಂಗ ಕ್ರಮಗಳಿಗೆ (ವಿಶೇಷ ಉಪಬಂಧಗಳು) ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 13 ರವರೆಗೆ, ಎರಡೂ ಸೇರಿದಂತೆ:–

ಪ್ರಸ್ತಾವ ಏನೆಂದರೆ:

ಅಧ್ಯಕ್ಷರು : "ಖಂಡ 2 ರಿಂದ 13 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 13 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ವ್ಯಾಸಂಗ ಕ್ರಮಗಳಿಗೆ (ವಿಶೇಷ ಉಪಬಂಧಗಳು) ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2004 ಕರ್ನಾಟಕ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ವ್ಯಾಸಂಗ ಕ್ರಮಗಳಿಗೆ (ವಿಶೇಷ ಉಪಬಂಧಗಳು) ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

6.40 ಪಿ ಎಂ

ಗೊಂದಲ

10 ಚುನಾವಣೆ ಪ್ರಸ್ತಾವ

ಅಧ್ಯಕ್ಷರು : ಮಾನ್ಯ ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು "ಈಗಾಗಲೇ ದಿನಾಂಕ: 20.7.2004ರಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಹಾಗೂ ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಮೂವರು ವಿಧಾನ ಸಭೆಯ ಸದಸ್ಯರನ್ನು ಮತ್ತು ಕರ್ನಾಟಕ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಲ್ವರು ವಿಧಾನ ಸಭಾ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಒಪ್ಪಿಗೆ ನಿಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಗೊಂದಲ

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ತಾವು ಯಾವುದೋ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದ್ದೀರಿ. ಆ ವಿಷಯವನ್ನು ಈಗ ಪ್ರಸ್ತಾಪ ಮಾಡಿ.

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ರೀತಿಯಾದ ನಡವಳಿಕೆ ಈ ಸದನಕ್ಕೆ ಗೌರವ ತರತಕ್ಕಂಥ ವಿಚಾರವಲ್ಲ. ಇವರೇನೋ ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದಾರೆ. ಆದರೆ, ಅವರದು ಬಿಲ್ ಪಾಸ್ ಆದರೂ ಕೂಡ ಅವರೇಕೆ ಕೂಗಬೇಕು?

ಗೊಂದಲ

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಈ ನಾಡಿನ ಮಕ್ಕಳ ಭವಿಷ್ಯದ ಜೊತೆಯಲ್ಲಿ ಇವರು ಚಿಲ್ಲಾಟವಾಡುತ್ತಿದ್ದಾರೆ.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮತ್ತೆ ಸದನದ ಬಾವಿಯಲ್ಲಿ ಇರತಕ್ಕಂಥ ಮಾನ್ಯ ಸದಸ್ಯರೆಲ್ಲರೂ ಕೂಡ ತಮ್ಮ ಆಸನಗಳಿಗೆ ಹೋಗಬೇಕು. ಈಗ ಅನೇಕ ಸದಸ್ಯರಿಗೆ ಶೂನ್ಯ ವೇಳೆಯಲ್ಲಿ ವಿಷಯಗಳನ್ನು ಪ್ರಸ್ತಾವ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇನೆ. ಈಗಾಗಲೇ ತಾವೆಲ್ಲರೂ ಪ್ರತಿಭಟನೆ ಮಾಡಿರತಕ್ಕಂಥದು ಮುಗಿದಿದೆ. ಆದ್ದರಿಂದ ತಾವೆಲ್ಲವರು ದಯಮಾಡಿ ತಮ್ಮ ಸೀಟ್‌ಗೆ ಹೋಗಿ.

ಗೊಂದಲ

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಪ್ರಚಾರ ಗಿಟ್ಟಿಸಿಕೊಳ್ಳುವ ದೃಷ್ಟಿಯಿಂದ ಇವರು ಈ ರೀತಿ ಮಾಡುತ್ತಿದ್ದಾರೆ. ಆದ್ದರಿಂದ ಟಿ.ವಿ. ಮತ್ತು ಪತ್ರಕರ್ತರನ್ನು ಬಂದ್ ಮಾಡಿದರೆ ಅವರು ತಮ್ಮಗಳ ಚೇರ್‌ಗೆ ಬರುತ್ತಾರೆ. ಇಷ್ಟು ಬಿಟ್ಟರೆ ಬೇರೇನೂ ಇಲ್ಲ.

ಗೊಂದಲ

ಅಧ್ಯಕ್ಷರು : ಈಗ ನಿಮ್ಮ ಪ್ರತಿಭಟನೆ ಮಾಡಿ ಆಯಿತು. ಆದ್ದರಿಂದ, ದಯಮಾಡಿ ತಮ್ಮ ಆಸನಗಳಿಗೆ ಹೋಗಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಈಗ 15 ನಿಮಿಷಗಳ ಕಾಲ ಸದನವನ್ನು ಮುಂದೂಡುತ್ತೇನೆ.

(ಸದನವು ಸಂಜೆ 6 ಗಂಟೆ 43 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು).

(ಸದನವು ಪುನಃ ರಾತ್ರಿ 8 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು) ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

11. ಅಧ್ಯಕ್ಷರ ಅಪ್ಪಣೆ ಮೇರೆಗೆ:

(1) ಮಂಗಳೂರು ಬಂದರಿಗೆ ಅದಿರು ಸಾಗಣೆ ಮಾಡುವಾಗ ಲಾರಿಗಳು ಬ್ರಹ್ಮಾವರ ಬಾರ್ಕೂರು ನಡುವಿನ ಬ್ರಿಡ್ಜ್‌ನ ಮೇಲೆ 20 ಟನ್ ಅದಿರು ಬದಲು 70 ಟನ್ ಸಾಗಿಸುವುದರಿಂದ ತೊಂದರೆಯಾಗುತ್ತಿರುವುದರ ಬಗ್ಗೆ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿರುವುದರಿಂದ ಒಂದು ವಿಷಯ ಪ್ರಸ್ತಾಪಿಸಬಯಸುತ್ತೇನೆ. ಮಂಗಳೂರು ಬಂದರಿಗೆ ಅದಿರು ಸಾಗಣೆ ಮಾಡುವ ಲಾರಿಗಳೇನಿವೆ, 20 ಟನ್‌ಗಳಷ್ಟು ಅದಿರು ಸಾಗಾಣಿಕೆ ಮಾಡಿಕೊಂಡು ಹೋಗುವ ಬದಲು 70 ಟನ್‌ಗಳಷ್ಟು ಅದಿರನ್ನು ಸಾಗಾಣಿಕೆ ಮಾಡುತ್ತಿರುವುದರಿಂದ ನಿನ್ನೆ ಸಾಯಂಕಾಲ ನನ್ನ ಕ್ಷೇತ್ರದ ಬ್ರಹ್ಮಾವರ– ಬಾರ್ಕೂರು ನಡುವಿದ್ದ ಬ್ರಿಡ್ಜ್‌ನ ಎರಡು span collapse ಆಯಿತು. ಗರ್ಡರ್ಸ್ ಎಲ್ಲಾ ಕಟ್ ಆಗಿ, ಅದೇ ರೀತಿ ರಾಷ್ಟ್ರೀಯ ಹೆದ್ದಾರಿಯಲ್ಲಿನ ಒಂದು ಬ್ರಿಡ್ಜ್ ಸಹ ಇದೇ ರೀತಿ ಹಾಳಾಗುತ್ತಿದೆ. ಈ ಬಗ್ಗೆ ಸ್ಥಳೀಯರೆಲ್ಲರೂ ಚಳವಳಿ ಮಾಡಬೇಕೆಂದಿದ್ದಾರೆ. ಅದಕ್ಕೋಸ್ಕರ, ಸರ್ಕಾರ ತಕ್ಷಣ ಈ ಬಗ್ಗೆ ಕ್ರಮ ಕೈಗೊಂಡು, ಒಂದು ಲಾರಿಯಲ್ಲಿ